‘ಲೇಡೀಸ್ ಫಸ್ಟ್’ ಎನ್ನುವ ಮಾತು ಬಹುತೇಕ ಸಂದರ್ಭಗಳಲ್ಲಿ ರಿಯಾಯಿತಿ ಅಥವಾ ಅನುಕಂಪದ ರೂಪದಲ್ಲಿ ಬಳಕೆಯಾಗುತ್ತದೆ. ಆದರೆ, ಇದು ಮಹಿಳೆಯರ ಬಗ್ಗೆ ಹೆಮ್ಮೆಯಿಂದ ಹೇಳಬೇಕಾದ ಮಾತು. ಗಂಡಿಗೆ ಸರಿಸಮನಾಗಿ ಇಲ್ಲವೇ ಗಂಡಿಗೂ ಮಿಗಿಲಾಗಿ ಹೆಣ್ಣು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ತನ್ನ ಛಾಪು ಮೂಡಿಸಿರುವ ದಿನಗಳಿವು. ಇಂಥ ಸನ್ನಿವೇಶದಲ್ಲಿ ಹಾಸ್ಯಕ್ಕೆ ಸಂಬಂಧಿಸಿದಂತೆ ಹೆಣ್ಣು ಹಿಂದುಳಿಯುವುದು ಸಾಧ್ಯವೆ? ಗಮನಿಸಿನೋಡಿ, ಸದ್ಯಕ್ಕೆ ಕನ್ನಡದ ಹಾಸ್ಯಸಾಹಿತ್ಯದಲ್ಲಿ ಮಹಿಳಾಮಣಿಗಳದೇ ಕಲರವ. ಗಂಡಿನ ಹಾಸ್ಯಕ್ಕೆ ವಸ್ತುವಾಗಿಯೇ ಹಾಸ್ಯಸಾಹಿತ್ಯದಲ್ಲಿ ಹೆಚ್ಚು ಕಾಣಿಸಿಕೊಂಡಿರುವ ಹೆಣ್ಣು, ಇದೀಗ ನಾಯಕಿ ಸ್ಥಾನದಲ್ಲಿ ಕುಳಿತು ‘ನಗೆಬಂಡಿ’ಯನ್ನು ಚಲಾಯಿಸುತ್ತಿದ್ದಾಳೆ. ಆ ಕಾರಣದಿಂದಲೇ, ಈ ವರ್ಷದ ‘ನಗೆ ವಿಶೇಷ’ ಸಂಚಿಕೆಯ ಸೂತ್ರಧಾರಿಣಿ ಲೇಖಕಿಯೇ ಆಗಿದ್ದಾಳೆ. ಲೇಡೀಸ್ ಫಸ್ಟ್ ಮತ್ತು ಬೆಸ್ಟ್ ಬರಹಗಳ ಸಂಚಿಕೆಯಿದು.

